ಶ್ರೀ ಬಿ.ಆರ್. ಯಾವಗಲ್ : ಈ ವರ್ಷದಲ್ಲಿ ತಾವು ಕೂಡಲೇ ಜಮೀನು ತೆಗೆದುಕೊಂಡು ಕಟ್ಟಡವನ್ನು ಕಟ್ಟಲಿಕ್ಕೆ ಪ್ರಾರಂಭಿಸಿ ಎಂದು ಒತ್ತಾಯಿಸುತ್ತೇನೆ ಜೊತೆಗೆ ತಾವು ಈ ಬಗ್ಗೆ ಭರವಸೆ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ: ನೋಡಿ ಜಾಗ ಸಿಗಬೇಕಾಗುತ್ತದೆ, ನಾವು ಪರಿಶೀಲನೆ ಮಾಡಬೇಕಾಗುತ್ತದೆ. ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಮೊದಲು ಜಾಗ ಕೊಡಿಸಿ.

ಶ್ರೀ ಬಿ.ಆರ್. ಯಾವಗಲ್ : ಅಲ್ಲಿ ಜಾಗ ಇದೆ ಸಾರ್.

ಅಧ್ಯಕ್ಷರು: ವಹಿಸಿ ಕೊಡಿ.

ಶ್ರೀ ಬಿ.ಆರ್. ಯಾವಗಲ್ : ಅವರು ಬೇಕೆಂದರೆ ನಾವು ಒದಗಿಸಿ ಕೊಡುತ್ತೇವೆ.

ಅಧ್ಯಕ್ಷರು : ಬೇಕು ಎಂದಲ್ಲ. ನೀವೇ ಇವರಿಗೆ ಹೇಳಿ ಜಾಗ ವಹಿಸಿ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಅನುಮತಿಯಾಗಿಲ್ಲ. ಮೊದಲು ಸರ್ಕಾರದಿಂದ ಅನುಮತಿಯಾದ ಕೂಡಲೇ ತಕ್ಷಣ ಆ ಜಾಗದಲ್ಲಿ ಬಿಲ್ಡಿಂಗ್ ಕಟ್ಟುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ಯಾವಗಲ್ : ತಾವು ಅನುಮತಿ ಕೊಡಿ. ಹೋದ ವರ್ಷವೇ ತಾವು ಈ ವರ್ಷ ಪ್ರಾರಂಭಿಸುತ್ತೇವೆಂದು ಹೇಳಿದ್ದೀರಿ, ತಾವು ಈ ವರ್ಷ ಅದಕ್ಕೆ ಅನುಮತಿ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಪರಿಶೀಲಿಸುತ್ತೇವೆ.

ದ್ವಿತೀಯ ಪಿ.ಯು. ಪಠ್ಯ ಪುಸ್ತಕಗಳ ಬಗ್ಗೆ.

36(135) ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ.(ಮಂಗಳೂರು ನಗರ ಉತ್ತರ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪದವಿ ಪೂರ್ವ ತರಗತಿಗಳು ಆರಂಭವಾಗಿದ್ದರೂ ದ್ವಿತೀಯ ಪಿ.ಯು. ಪಠ್ಯಪುಸ್ತಕಗಳು ಅಲಭ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಂಖ್ಯಾಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪಠ್ಯ ಪುಸ್ತಕಗಳನ್ನು ಪ್ರಕಟಿಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಪಠ್ಯಪುಸ್ತಕಗಳ ಲಭ್ಯತೆಗೆ ಸರ್ಕಾರ ಕೈಗೊಳ್ಳಲಿರುವ ತುರ್ತು ಕ್ರಮಗಳು ಯಾವುವು ? (ವಿವರ ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–

(ಅ) ಹೌದು, ಪದವಿ ಪೂರ್ವ ತರಗತಿಗಳು ಆರಂಭವಾಗಿದ್ದು, ಪ್ರವೇಶಕ್ಕೆ ದಿನಾಂಕ : 26–06–2014 ಕಡೆಯ ದಿನವಾಗಿದೆ. ಈಗಾಗಲೇ ಶೇಕಡ 60ರಷ್ಟು ಪ್ರಮಾಣದ ಪಠ್ಯಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.

(ಆ) ಸಂಖ್ಯಾಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯವು ಪೂರ್ಣಗೊಂಡಿದ್ದು ಸದ್ಯದಲ್ಲಿಯೇ ಮಾರುಕಟ್ಟೆಗೆ ಬರಲಿದೆ.

(ಇ) ಹಾಲಿ ಮಾರುಕಟ್ಟೆಯಲ್ಲಿ ಶೇ. 60ರಷ್ಟು ಪಠ್ಯಪುಸ್ತಕಗಳು ಲಭ್ಯವಿದ್ದು, ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ವಿತರಕರ ವಿಳಾಸವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಿದೆ ಮತ್ತು ತ್ವರಿತವಾಗಿ ಪುಸ್ತಕಗಳನ್ನು ಮುದ್ರಿಸಿ ಕೊರತೆಯಾಗದಂತೆ ಕ್ರಮವಹಿಸಲು ಕರ್ನಾಟಕ ಪಠ್ಯ ಪುಸ್ತಕ ಸಂಘಕ್ಕೆ ತಿಳಿಸಲಾಗಿದೆ.

ಶ್ರೀ ಬಿ.ಎ. ಮೋಹಿಯುದ್ದೀನ್ ಬಾವಾ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಸರ್ಕಾರಕ್ಕೆ ಹಳೆಯ ಮುದ್ರಣದ ಪಠ್ಯ ಪುಸ್ತಕಗಳು ಮಾರಾಟವಾಗುತ್ತಿರುವುದರ ಬಗ್ಗೆ ಏನಾದರೂ ವಿಷಯ ತಿಳಿದಿದೆಯೇ ? ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಬಯಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ : ತಾವು ಈಗ ಶೇಕಡ 60ರಷ್ಟು ಪುಸ್ತಕಗಳು ಲಭ್ಯ ಇವೆ ಎಂದು ಉತ್ತರಿಸಿದ್ದೀರಿ. ಆದರೆ, ಮೂಲಭೂತವಾಗಿ ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, PUC text books ನ್ನು ಯಾರಿಗೆ tender ಮಾಡಿ print ಮಾಡುವುದಕ್ಕೆ ಕೊಟ್ಟಿದ್ದೀರಿ, ಅವರು ಒಂದಕ್ಕೆರಡು rate quote ಮಾಡಿದ್ದಾರೆ. ನನ್ನ ಹತ್ತಿರ ಕೆಲವು ಅಂಕಿ ಅಂಶಗಳನ್ನು ಇಟ್ಟುಕೊಂಡಿದ್ದೇನೆ. ಹಿಂದೆ 30 ಕೋಟಿ ರೂಪಾಯಿಗಳಿಗೆ ಈ ಪುಸ್ತಕಗಳು print ಆಗತಕ್ಕಂಥ ಸಂದರ್ಭದೊಳಗಡೆ ಅದು ರಾಜ್ಯದೊಳಗೆ ಅಚ್ಚುಕಟ್ಟಾಗಿ print ಮಾಡತಕ್ಕಂಥ printing press ನವರು ಇದ್ದಾಗ ರೂ.30 ಕೋಟಿಗಾಗುತ್ತಿದ್ದ tender ಈ ಸಲ ರೂ.80 ಕೋಟಿಗೆ ಯಾರೋ ಹೊರ ರಾಜ್ಯದವರು ತೆಗೆದುಕೊಂಡಿದ್ದಾರೆ. ನಿಮ್ಮಲ್ಲಿ ಮಾಹಿತಿ ಇದ್ದರೆ ನಂತರ ತಾವು ಹೇಳಿ.

ಅಧ್ಯಕ್ಷರು : ಈ ಬಗ್ಗೆ ನೀವು ಪ್ರತ್ಯೇಕವಾದ ಪ್ರಶ್ನೆ ಕೇಳಬೇಕು.

ಶ್ರೀ ವೈ.ಎಸ್.ವಿ.ದತ್ತಾ : ಪ್ರತ್ಯೇಕ ಪ್ರಶ್ನೆಯಲ್ಲ. 80 ಕೋಟಿಗೆ tender ಆದಮೇಲೆ ಇನ್ನು ಪುಸ್ತಕಗಳನ್ನು supply ಮಾಡಿಲ್ಲವೆಂದರೆ ಹೇಗೆ ?

ಅಧ್ಯಕ್ಷರು : ನೀವು ಪ್ರತ್ಯೇಕ ಪ್ರಶ್ನೆ ಕೇಳಿ.

ಶ್ರೀ ವೈ.ಎಸ್.ವಿ. ದತ್ತಾ : ಇದು ಪಠ್ಯ ಪುಸ್ತಕಗಳಿಗೆ ಸಂಬಂಧಪಟ್ಟದ್ದೆ. ಈಗ ನನ್ನ ಲೆಕ್ಕದ ಪ್ರಕಾರ ವಿದ್ಯಾರ್ಥಿಗಳ ಮೇಲೆ ಶೇಕಡ 34.7% ಹೊರೆ ನಮ್ಮ ಮಕ್ಕಳ ಮೇಲೆ ಬೀಳುತ್ತದೆ. ಯಾವನಿಗೊ ರೂ.80 ಕೋಟಿ tender ಆಗಿದೆ.

ಶ್ರೀ ಕಿಮ್ಮನೆ ರತ್ನಾಕರ : ಈಗಾಗಲೇ ನಾಳೆ ಪದವಿ ಪೂರ್ವ ತರಗತಿ ಪ್ರವೇಶಕ್ಕೆ last date ಇದೆ, ಈಗಾಗಲೇ 60% ನಷ್ಟು ಪುಸ್ತಕಗಳು ಸರಬರಾಜು ಆಗಿದೆ. Tender ಆಗಿದ್ದರ ಬಗ್ಗೆ dispute ಇತ್ತು. ಹೀಗಾಗಿ ನ್ಯಾಯಾಲಯಕ್ಕೆ ಹೋಗಿದ್ದರಿಂದ ಸ್ವಲ್ಪ ವಿಳಂಬವಾಯಿತು. ಎರಡು tender ನವರು ನ್ಯಾಯಾಲಯಕ್ಕೆ approach ಮಾಡಿದ್ದರಿಂದ ಸ್ವಲ್ಪ ಮಟ್ಟಿಗೆ ಸಮಸ್ಯೆಯಾಯಿತು. ಆದರೆ, ಇನ್ನೊಂದು ವಾರದೊಳಗೆ ಪೂರ್ಣ ರೀತಿಯ books, ಆದರೆ, ಹೆಚ್ಚಿಗೆ ಸಂಖ್ಯೆ ಇರುವ title ಇರುವ ಪುಸ್ತಕಗಳೆಲ್ಲವೂ print ಆಗಿವೆ. ಕಡಿಮೆ ಸಂಖ್ಯೆ ಇರುವ ಅಂದರೆ ಉರ್ದು, ಮತ್ತಿತರ ಪುಸ್ತಕಗಳು ಅಂದರೆ ಬರಿ 500, 600, 1000 ಪುಸ್ತಕಗಳು print ಆಗುವಂಥವುಗಳು 30 ರಿಂದ 31 ಇದೆ. ಅದು ಇನ್ನೊಂದು ವಾರದಲ್ಲಿ complete ಆಗುತ್ತದೆ. ತಾವು ಈಗ ಏನು ಹೇಳಿದಿರಿ ಅದನ್ನು ನಾನು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ನಮ್ಮಿಂದ ಯಾವುದೇ ರೀತಿಯಿಂದ ಆಗಿಲ್ಲ. Tender ಮೇಲೆ ಆಗಿರತಕ್ಕಂಥ ಪ್ರಕ್ರಿಯೆ ಅದು. ಇಡೀ ದೇಶದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಕೊಡುತ್ತಿದ್ದೇವೆ. ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಏನು ತಾವು ಹೇಳುತ್ತಿದ್ದೀರಿ, ಆ ಪುಸ್ತಕಗಳನ್ನು ಬೇಕಾದರೆ ಇಲ್ಲಿಗೆ ತರಿಸುತ್ತೇನೆ. It is the lowest price all over India.

ಅಧ್ಯಕ್ಷರು : ಬೇಡ ಬೇಡ.

ಶ್ರೀ ವೈ.ಎಸ್.ವಿ. ದತ್ತಾ : ನನ್ನ ಹತ್ತಿರ ಇರುವ ಮಾಹಿತಿಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ವಿವಿಧ ಯೋಜನೆಗಳಡಿ ಶೌಚಾಲಯಗಳ ನಿರ್ಮಾಣ

37(349) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–